# ಬೆಳೆದು ದೊಡ್ಡವನಾಗುವುದೆಂದರೆ...

ಬಸ್ಸೆಂದು ಆಕಾಶ ನೋಡಿಕೊಂಡು ಸಿಗರೇಟಿನ ಹೊಗೆಯನ್ನು ಬಿಟ್ಟ ಹುಡುಗನ ಎತ್ತರ ಎರಡೇ ವರ್ಷಗಳಲ್ಲಿ ಮೂರು ಇಂಚು ಹೆಚ್ಚಾಗಿತ್ತು. ಅಪ್ಪನೇ ನಿರ್ಮಾಣ ಮಾಡಿದ ಮೊದಲ ಸಿನಿಮಾದಲ್ಲಿ ನಟಿಸಿದ ಹುಡುಗ. ತೆರೆಮೇಲೆ ಆತ 'ಲೂಸ್ ಲೂಸ್' ಆಗಿ ಕಾಣುವಂತೆ ನೋಡಿಕೊಂಡ ಕ್ರೆಡಿಟ್ಟು ನಿರ್ದೇಶಕ ಸೂರಿಗೆ ಸಲ್ಲಬೇಕು. ಹುಡುಗ 'ಟೈಟ್' ಆಗುವ ಮಟ್ಟಕ್ಕೆ ಬೆಳೆದರೂ 'ಲೂಸ್' ಎಂಬ ಗುಣವಿಶೇಷಣ ಅಳಿಸಿಹೋಗಲಿಲ್ಲ.

'ನಾನು ಬೆಳಿತಿದ್ದೀನಲ್ಲ ಮಮ್ಮಿ' ಎನ್ನುವ ಜಾಹೀರಾತಿನ ವಾಕ್ಯನ್ನು ಈ ನಟನಿಗೆ ಅನುಮಾನವೇ ಇಲ್ಲದಂತೆ ಅನ್ವಯಿಸಬಹುದಾದ ಕಾಲ ಏಳೆಂಟು ವರ್ಷಗಳ ಹಿಂದೆ ಇತ್ತು. ದೈಹಿಕವಾಗಿ ಅಷ್ಟೇ ಅಲ್ಲದೆ ಅಭಿನಯದಲ್ಲಿಯೂ ಎತ್ತರಕ್ಕೆ ಬೆಳೆಯುತ್ತಾ ಹೋದ ಹುಡುಗ. ಪ್ರೀತಿಪಾತ್ರರು ಯುವಕನಾದ ಮೇಲೂ ಹುಡುಗ ಎಂದು ಕರೆಯುವುದನ್ನು ನಿಲ್ಲಿಸಲಿಲ್ಲ. ಹುಡುಗಾಟಿಕೆಯಲ್ಲಿ ಏನೂ ಕಡಿಮೆಯಿಲ್ಲ ಎಂದು ಕೆನ್ನೆ ಚಿವುಟಿದವರೂ ಇದ್ದಾರೆ.

ಮನೆಯ ಆರ್ಥಿಕ ಬಲವನ್ನು ಬೆನ್ನಿಗಿಟ್ಟುಕೊಂಡ ಹುಡುಗ ಆಯ್ಕೆ ಮಾಡಿಕೊಂಡ ಬಹುತೇಕ ಸಿನಿಮಾಗಳು ವಸ್ತುಗಳ ದೃಷ್ಟಿಯಿಂದ ಏಕತಾನ ಎನಿಸಿದರೂ, ನಿರೂಪಣೆ ಹಾಗೂ ತಂತ್ರಜ್ಞರ ಶ್ರದ್ಧೆಯ ವಿಷಯದಲ್ಲಿ ಏನೂ ಕಡಿಮೆಯಿಲ್ಲ ಎನ್ನುವಂತಿದ್ದವು. ನೋಡನೋಡುತ್ತಲೇ ಬಹುತಾರಾಗಣದ ಸಿನಿಮಾದಲ್ಲಿ ಕೂಡ ಹುಡುಗ ಮೂವರು ನಾಯಕರಲ್ಲಿ ಒಬ್ಬನಾಗಿ ನಟಿಸಿದ. ದೊಡ್ಡಮನೆಯ ಸಿನಿಮಾ ಅವಕಾಶ ಅಂದಮೇಲೆ ಇಲ್ಲ ಎನ್ನಲಾದೀತೆ? ರೀಮೇಕ್ ಆದರೂ ಅದರಲ್ಲಿ ಕನ್ನಡದ್ದೇ ಮಾತಿನ ಹದವಿತ್ತು. ತಮಾಷೆಯ ಹೆಚ್ಚು ಮಾತುಗಳು ಈ ಹುಡುಗ ನಿರ್ವಹಿಸಿದ ಪಾತ್ರಕ್ಕೆ ಇದ್ದವು. ಅದು ವರದಾನವೂ ಆಯಿತೆನ್ನಿ. ಡೈಲಾಗ್ ಹೊಡೆಯುವುದರಲ್ಲಿ ಹುಡುಗ ನಿಸ್ಸೀಮ ಎನಿಸಿಕೊಂಡ. ಅದಕ್ಕೂ ಮೊದಲು ಹೊಸ ನಿರ್ದೇಶಕರೊಬ್ಬರು ತಮ್ಮ ಗಟ್ಟಿ ಚಿತ್ರಕಥೆಯಿಂದಲೇ ಈ ನಟನನ್ನು ದೊಡ್ಡ ಸಾಣೆಗೆ ಒಳಪಡಿಸಿದ್ದರಲ್ಲ, ಅದೂ ಕೆಲಸಕ್ಕೆ ಬಂತು. ದೊಡ್ಡಮನೆಯವರು ನಿರ್ಮಾಣ ಮಾಡಿದ ಬಹುನಟರ ಇನ್ನೊಂದು ಸಿನಿಮಾದಲ್ಲಿ ಕೂಡ ಅಭಿನಯಿಸಿದ ಹುಡುಗ, ಆಮೇಲೆ ಕಳೆದುಹೋದದ್ದು ಎಲ್ಲಿ ಎಂದು ಅನೇಕರು ಮಾತನಾಡಿಕೊಂಡರು.

ಒಬ್ಬ ನಿರ್ದೇಶಕರು 'ಪ್ರತಿಭಾವಂತ ಏನೋ ಹೌದು, ಆದರೆ ಅಶಿಸ್ತಿನ ಮೂಟೆ' ಎಂದು ದೂರಿದರು. ಇನ್ನೊಬ್ಬ ನಿರ್ದೇಶಕರು ನೇರವಾಗಿ 'ತಲೆತಿರುಕತನದ ಹುಡುಗ' ಎಂದು ಟೀಕಿಸಿದರು. 'ಎರಡು ಮೂರು ಸಿನಿಮಾ ಸಿಕ್ಕಿದರೆ ಮೇಲಕ್ಕೆ ಹೋಗಿಬಿಡುತ್ತಾರೆ' ಎಂದು ವ್ಯಂಗ್ಯ ಆಡಿದವರೂ ಇದ್ದಾರೆ. 'ಕಾರಿನಲ್ಲಿ ಹುಡುಗಿಯರನ್ನು ತುಂಬಿಕೊಂಡು ಪಾರ್ಟಿ ಗೀರ್ಟಿ ಎಂದು ಅಡ್ಡಾಡಿಬಿಟ್ಟರೆ ಬಂತೆ ಭಾಗ್ಯ?' ಎಂದು ಖಾಸಗೀತನವನ್ನು ಕೆದಕಿದವರೂ ನಮ್ಮ ನಡುವೆ ಇದ್ದಾರೆ.

ಹೌದು, ಹುಡುಗನ ಹೈಟು ಹೆಚ್ಚಾಗಿದೆ. ಗಾಸಿಪ್ಪುಗಳ ತೂಕವೂ ಹೆಚ್ಚಾಗಿದೆ. ತೂಕದ ಪಾತ್ರಗಳ ಕನವರಿಕೆ ಇನ್ನೂ ಇದೆ. ಮತ್ತೊಂದು ಸಿಗರೇಟಿಗೆ ಬೆಂಕಿ ಕೊಟ್ಟು, ಹೊಸ ಬಗೆಯಲ್ಲಿ ಹೊಗೆ ಚೆಲ್ಲುವ ನಟ, ಎಲ್ಲಾ ಟೀಕೆಗಳಿಗೂ ಒಂದಲ್ಲಾ ಒಂದು ದಿನ ಹೊಗೆ ಹಾಕಿಸುವುದಾಗಿ ಹೇಳಿಕೊಂಡು ನಕ್ಕಿದ್ದು ಇದೆಯಲ್ಲಾ; ಅದು ಈ ಜಮಾನದವರ ಆತ್ಮವಿಶ್ವಾಸವಂತೂ ಹೌದು.

**● ವಿಶಾಖ ಎನ್.**

Printed and Published by S.V. Srinivasan on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000,
Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68